THE NEW INDIAN EXPRESS
KALABURAGI
03 KALABURAGI THURSDAY 11.01.2024

# CUK provides better career options by bringing in reputed firms: V-C

## Three rounds of recruitment process involve a written test, demo class, interview by HR

**EXPRESS NEWS SERVICE**
@ Kalaburagi

"TO be a good teacher, you have to work with commitment, dedication, discipline and sincerity," said Vice-Chancellor of Central University of Karnataka (CUK) Prof Battu Satyanarayana here on Tuesday.

Speaking after inauguration of campus placement drive in the university in association with Rashtrotthana Parishat Bengaluru, Prof Satyanarayana, who addressed the B Ed trainees, said "Whichever organization you join, you should bring good name and fame to the University and the institute you work. To provide better career opportunities to our students the CUK has strengthened its placement cell and by inviting reputed companies and institutions. Rastrotthana Parishat is one of the very reputed organizations in the education sector which has been involved in teaching kids at the early stage which is a very difficult job."



Coordinator of Training and Placement Wing of Rastrottahana Parishat, Manjula Veeranna speaks at the programme at CUK in Kalaburagi on Tuesday

Training and Placement wing coordinator of Rastrotthana Parishat Bengaluru Manjula Veeranna who spoke on the occasion briefed about the organization. She said "Rastrotthana Parishat presently has 11 CBSE schools across the state including Kalaburagi and we are coming up with four more schools. We want to become role model institutions in every district, hence we are looking for good teachers who can become partners in nation building. We are looking for the teachers who are open minded and lifelong learners. Rastrotthana Parishat is the best place to work and grow."

Rastrotthana Parishat's Kalaburagi convener Krishna Joshi who also spoke on the occasion said that Rastrotthana Parishat was started in the year 1965 at Bengaluru to build a healthy and sustainable society. It is involved in the peoples' service through various activities such as education, cattle protection, and slum development etc, Krishna Joshi said.

Placement Officer of CUK Paramesh in his introductory remarks said that there will be three rounds in this recruitment process. It starts with a written test, then demo class and finally the interview by the Human Resource Managers.

Dean School of Education, Prof. G R Angadi and Mayur Pujar also spoke. All the B. Ed trainees of CUK attended the event.

VK
ವಿಜಯ ಕರ್ನಾಟಕ
e-paper

ಸಿಯುಕೆಯಲ್ಲಿ ಬಿಇಡಿ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಪ್ಲೇಸ್‌ಮೆಂಟ್

# ಉತ್ತಮ ಶಿಕ್ಷಕರಾಗಲು ಶಿಸ್ತು ಅಗತ್ಯ



ಆಳಂದ ತಾಲೂಕಿನ ಕಡಗಂಚಿಯ ಸಿಯುಕೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಬಿಇಡಿ ವಿದ್ಯಾರ್ಥಿಗಳಿಗೆ ನಡೆದ ಕ್ಯಾಂಪಸ್ ಪ್ಲೇಸ್ ಮೆಂಟ್ ಅಭಿಯಾನವನ್ನು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಉದ್ಘಾಟಿಸಿ ಮಾತನಾಡಿದರು.

**ವಿಕ ಸುದ್ದಿಲೋಕ** ಆಳಂದ

ಉತ್ತಮ ಶಿಕ್ಷಕರಾಗಲು ಬದ್ಧತೆ, ಸಮರ್ಪಣೆ, ಶಿಸ್ತು ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುವುದು ಆವಶ್ಯಕ ಎಂದು ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ತಾಲೂಕಿನ ಕಡಗಂಚಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು ಸಹಯೋಗದಲ್ಲಿ ಬಿಇಡಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕ್ಯಾಂಪಸ್ ಪ್ಲೇಸ್‌ಮೆಂಟ್ ಅಭಿಯಾನವನ್ನು ಉದ್ಘಾಟಿಸಿ ಪ್ರಶಿಕ್ಷಣಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ನೀವು ಯಾವುದೇ ಸಂಸ್ಥೆಗೆ ಸೇರಿದರೂ ವಿಶ್ವವಿದ್ಯಾಲಯ ಮತ್ತು ನೀವು ಕೆಲಸ ಮಾಡುವ ಸಂಸ್ಥೆಗೆ ಒಳ್ಳೆಯ ಹೆಸರು ಮತ್ತು ಕೀರ್ತಿ ತರಬೇಕು ಎಂದು ಕಿವಿಮಾತು ಹೇಳಿದರು.

ನಿಮಗೆ ಉತ್ತಮ ವೃತ್ತಿ ಅವಕಾಶಗಳನ್ನು ಒದಗಿಸಲು ನಾವು ಉದ್ಯೋಗ ಕೋಶ ಬಲಪಡಿಸಿದ್ದೇವೆ. ಪ್ರತಿಷ್ಠಿತ ಕಂಪನಿಗಳು ಮತ್ತು ಸಂಸ್ಥೆಗಳನ್ನು ಆಹ್ವಾನಿಸಿದ್ದೇವೆ. ರಾಷ್ಟ್ರೋತ್ಥಾನ ಸಂಸ್ಥೆ ಶಿಕ್ಷಣ ಕ್ಷೇತ್ರದ ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿದೆ. ಆರಂಭಿಕ ಹಂತದಲ್ಲಿ ಮಕ್ಕಳಿಗೆ ಕಲಿಸುವುದು ತುಂಬಾ ಕಷ್ಟದ ಕೆಲಸ. ಆದಕ್ಕಾಗಿ ನೀವು ವಿಶೇಷ ಕೌಶಲ್ಯ ಮತ್ತು ವ್ಯಕ್ತಿತ್ವ ಹೊಂದಿರಬೇಕು ಎಂದು ಸಲಹೆ ನೀಡಿದರು.

ಪರಿಷತ್ತಿನ ತರಬೇತಿ ಮತ್ತು ಉದ್ಯೋಗ ಸಂಯೋಜಕಿ ಡಾ.ಮಂಜುಳಾ ವೀರಣ್ಣ ಮಾತನಾಡಿ, ಸಂಸ್ಥೆಯ ಸಂಕ್ಷಿಪ್ತ ಮಾಹಿತಿ ನೀಡಿದರು. ಕಲಬುರಗಿ ಸಂಯೋಜಕ ಕೃಷ್ಣಾಜಿ ಜೋಶಿ, ಡೀನ್ ಪ್ರೊ.ಜಿ.ಆರ್.ಅಂಗಡಿ ಮಾತನಾಡಿದರು. ಉದ್ಯೋಗ ಕೋಶದ ಅಧಿಕಾರಿ ಡಾ.ಪರಮೇಶ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಡಾ.ಮಯೂರ್ ಪೂಜಾರ್ ವಂದಿಸಿದರು. ಬಿಇಡಿ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

### ಕೇಂದ್ರೀಯ ವಿಶ್ವವಿದ್ಯಾಲಯದ 75 ವಿದ್ಯಾರ್ಥಿಗಳ ಕ್ಯಾಂಪಸ್ ಪ್ಲೇಸ್‌ಮೆಂಟ್

# ಉದ್ಯೋಗಿಗಳಾಗಿ ಇಲ್ಲವೇ ಸಂಶೋಧಕರಾಗಿ: ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ್ ಕರೆ

ಕಲಬುರ್ಗಿ, ಜೂ.23- ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ಹೊರ ಹೋಗುವಾಗ ಪ್ರಮಾಣ ಪತ್ರದೊಂದಿಗೆ ಉದ್ಯೋಗ ಪಡೆದು-ಕೊಂಡು ಹೋಗಬೇಕು ಇಲ್ಲವೆ ಎನ್‌ಇಟಿಜೆಆರ್‌ಎಫ್ ಮಾಡಿ ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಂಶೋಧನೆ ಮಾಡಬೇಕು ಎಂದು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ್ ಅವರು ಹೇಳಿದರು.

ಜಿಲ್ಲೆಯ ಆಳಂದ್ ತಾಲ್ಲೂಕಿನ ಕಡಗಂಚಿ ಬಳಿ ಇರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆದ 75 ವಿದ್ಯಾರ್ಥಿಗಳಿಗೆ ಶುಕ್ರವಾರ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಸೇರಿ ದೇಶದ ಸೇವ 'ಮಾಡಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಸಂಸ್ಥೆಗಳು ತುದಿಗಾಲ ಮೇಲೆ ನಿಂತಿವೆ. ಅದ್ದರಿಂದ ತಾವು ಕಠಿಣ ಪರಿಶ್ರಮದಿಂದ ಕೆಲಸ ಮಾಡಿ ವಿಶ್ವ ವಿದ್ಯಾಲಯಕ್ಕೆ ಹೆಸರು ತರಬೇಕು. ವಿಶ್ವವಿದ್ಯಾಲಯ ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯ ಹೆಚ್ಚಿಸಲು ಕಟಿಬದ್ಧವಾಗಿದೆ ಎಂದರು.



ಕುಲಸಚಿವ ಪ್ರೊ. ಬಸವರಾಜ್ ಡೋಣೂರ್ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಬೇಕಾದ ಅಗತ್ಯ ತರಬೇತಿ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಲು ವಿಶ್ವವಿದ್ಯಾಲಯವು ಕಟಿಬದ್ಧವಾಗಿದೆ. ವಿಶ್ವವಿದ್ಯಾಲಯ ಪ್ರಾರಂಭವಾಗಿ 14 ವರ್ಷಗಳಾಗಿದ್ದು ನಮ್ಮ ಅನೇಕ ವಿದ್ಯಾರ್ಥಿಗಳು ದೇಶದಾದ್ಯಂತ ಅನೇಕ ಸಂಸ್ಥೆಗಳಲ್ಲಿ ಕಾರ್ಯ ಮಾಡುತ್ತಿದ್ದು ಇದು ವಿಶ್ವವಿದ್ಯಾಲಯದ ಹೆಮ್ಮೆಯಾಗಿದೆ. ನಮ್ಮ ಹಳೆಯ ವಿದ್ಯಾರ್ಥಿಗಳ ಸಂಘ ಮಾಡುವ ಮೂಲಕ ಅವರನ್ನು ವಿಶ್ವವಿದ್ಯಾಲಯದೊಂದಿಗೆ ಜೋಡಿಸುವ ತನ್ಮೂಲಕ ಪ್ರಸ್ತುತ ವಿದ್ಯಾರ್ಥಿಗಳಿಗೆ ಉದ್ಯೋಗ ಹಾಗು ಸಂಶೋಧನೆಯಲ್ಲಿ ಸಹಾಯಮಾಡಲಾಗುತ್ತಿದೆ ಎಂದರು.

ವಿಶ್ವವಿದ್ಯಾಲಯದ ಉದ್ಯೋಗ ಮತ್ತು ತರಬೇತಿ ಅಧಿಕಾರಿ ಡಾ. ಪರಮೇಶ್ ಅವರು ಮಾತನಾಡಿ, ಅವಂಟಿಸ ಫೆಲೋಸ್ನಲ್ಲಿ 9, ಅಜೀಮ್ ಪ್ರೇಮಜಿ ಫೌಂಡೇಶನ್‌ನಲ್ಲಿ 17, ಆಕಾಶ್ ಬೈಜುಸ್‌ನಲ್ಲಿ 13, ಉಳಿದವರೆಲ್ಲರೂ ಕ್ಯೂಸ್ಪೈಡರ್ಸ್ ಮತ್ತು ಕೊಡನೆಸ್ಟ್ ಟೆಕ್ನೋಲೋಜಿಸ್‌ನಲ್ಲಿ ಉದ್ಯೋಗ ಪಡೆದಿದ್ದಾರೆ. ಇದು ಎರಡನೇ ಹಂತದ ಉದ್ಯೋಗ ಮೇಳವಾಗಿದ್ದು ಆಗಸ್ಟ್‌ವರೆಗೆ ಮುಂದುವರೆಯಲಿದೆ. ಇನ್ನು ಹೆಚ್ಚಿನ ವಿದ್ಯಾರ್ಥಿಗಳು ಉದ್ಯೋಗ ಪಡೆಯಲಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಡಾ. ವೆಂಕಟರಮಣ್ ದೊಡ್ಡಿ ಮತ್ತು ಉದ್ಯೋಗ ಪ್ರಮಾಣ ಪತ್ರ ಪಡೆದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ...ರು ಕುಡಿದು ಆಸ್ಪತ್ರೆ ಸೇರಿದ ರೋಗಿಗಳ ಆರೋಗ್ಯ ವಿಚಾರಿಸಿದ ಡಾ. ಶಿಂದೆ

# ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ 75 ಸಿಯುಕೆ ವಿದ್ಯಾರ್ಥಿಗಳು ಆಯ್ಕೆ



ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆದ ಸಿಯುಕೆಯ ವಿದ್ಯಾರ್ಥಿಗಳಿಗೆ ನೇಮಕಾತಿ ಪತ್ರವನ್ನು ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ವಿತರಿಸಿದರು.

**ವಿಕ ಸುದ್ದಿಲೋಕ** ಕಲಬುರಗಿ

ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ಹೊರ ಹೋಗುವಾಗ ಪ್ರಮಾಣ ಪತ್ರದೊಂದಿಗೆ ಉದ್ಯೋಗ ಪಡೆದುಕೊಂಡು ಹೋಗಬೇಕು ಇಲ್ಲವೆ ಎನ್‌ಇಟಿ, ಜೆಆರ್‌ಎಫ್ ಮಾಡಿ ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಂಶೋಧನೆ ಮಾಡಬೇಕು ಎಂದು ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆದ ಸಿಯುಕೆಯ 75 ವಿದ್ಯಾರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದರು. ವಿದ್ಯಾರ್ಥಿಗಳು ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಸೇರಿ ದೇಶದ ಸೇವೆ ಮಾಡಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಸ್ಥೆಗಳು ತುದಿಗಾಲ ಮೇಲೆ ನಿಂತಿವೆ. ಆದ್ದರಿಂದ ತಾವು ಕಠಿಣ ಪರಿಶ್ರಮದಿಂದ ಕೆಲಸ ಮಾಡಿ ವಿಶ್ವವಿದ್ಯಾಲಯಕ್ಕೆ ಹೆಸರು ತರಬೇಕು. ವಿಶ್ವವಿದ್ಯಾಲಯ ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯ ಹೆಚ್ಚಿಸಲು ಕಟಿಬದ್ಧವಾಗಿದೆ ಎಂದು ಹೇಳಿದರು.

ಕುಲಸಚಿವರಾದ ಪ್ರೊ.ಬಸವರಾಜ ಡೋಣೂರ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಬೇಕಾದ ಅಗತ್ಯ ತರಬೇತಿ ಮತ್ತು ಮೂಲ ಸೌಕರ್ಯ ಒದಗಿಸಲು ಸಿಯುಕೆ ಕಟಿಬದ್ಧವಾಗಿದೆ. ವಿಶ್ವವಿದ್ಯಾಲಯ ಪ್ರಾರಂಭವಾಗಿ 14 ವರ್ಷಗಳಾಗಿದ್ದು ಅನೇಕ ವಿದ್ಯಾರ್ಥಿಗಳು ದೇಶಾದ್ಯಂತ ಅನೇಕ ಸಂಸ್ಥೆಗಳಲ್ಲಿ ಕಾರ್ಯಮಾಡುತ್ತಿದ್ದು ಇದು ವಿಶ್ವವಿದ್ಯಾಲಯದ ಹೆಮ್ಮೆಯಾಗಿದೆ. ಹಳೆಯ ವಿದ್ಯಾರ್ಥಿಗಳ ಸಂಘ ಮಾಡುವ ಮೂಲಕ ಅವರನ್ನು ವಿಶ್ವವಿದ್ಯಲಯದೊಂದಿಗೆ ಜೋಡಿಸುವ ತನ್ಮೂಲಕ ಪ್ರಸ್ತುತ ವಿದ್ಯಾರ್ಥಿಗಳಿಗೆ ಉದ್ಯೋಗ ಹಾಗೂ ಸಂಶೋಧನೆಯಲ್ಲಿ ಸಹಾಯ ಮಾಡಲಾಗುತ್ತಿದೆ ಎಂದು ಹೇಳಿದರು.

ಅವಂಟಿಸ ಫೆಲೋಸ್‌ನಲ್ಲಿ 9, ಅಜೀಮ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ 17, ಆಕಾಶ ಬೂಜುಸ್‌ನಲ್ಲಿ 13 ಉಳಿದವರೆಲ್ಲ ಕ್ಯೂಸ್ಪೈಡರ್ಸ್ ಮತ್ತು ಕೊಡನೆಸ್ಟ ಟೆಕ್ನೋಲೊಜಿಸ್‌ನಲ್ಲಿ ಉದ್ಯೋಗ ಪಡೆದಿದ್ದಾರೆ. ಇದು ಎರಡನೇ ಹಂತದ ಉದ್ಯೋಗ ಮೇಳವಾಗಿದ್ದು ಆಗಸ್ಟ್‌ವರೆಗೆ ಮುಂದುವರಿಯಲಿದ್ದು, ಇನ್ನು ಹೆಚ್ಚಿನ ವಿದ್ಯಾರ್ಥಿಗಳು ಉದ್ಯೋಗ ಪಡೆಯಲಿದ್ದಾರೆ.

- **ಡಾ.ಪರಮೇಶ**
ವಿವಿ ಉದ್ಯೋಗ ಮತ್ತು ತರಬೇತಿ ಅಧಿಕಾರಿ

ಡಾ.ವೆಂಕಟರಮಣ ದೊಡ್ಡಿ ಇತರ ಉದ್ಯೋಗ ಪ್ರಮಾಣ ಪತ್ರ ಪಡೆದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

REDMI NOTE 8 PRO
AI QUAD CAMERA

# 75 CUK students land jobs via placement drive

**EXPRESS NEWS SERVICE** @Kalaburagi

"WHILE going out from university with certificates, students should grab a job or with NET/JRF, they should do research in prestigious national institutes," said CUK Vice-chancellor Battu Satyanaraya. Addressing students of the Central University of Karnataka who got campus placement, Battu Satyanarayana said that,"There is always a demand for talented students in industries and companies as they will be waiting for the right people. You should get into prestigious companies and work hard to bring a name and fame to the university." He said the university is committed to capacity building and nurturing students. Registrar Prof Basavaraj P Donur, who also spoke, said that the Central University of Karnataka is providing all the required training and placement assistance to the students.




"The university has completed 14 years and it is proud that many of our alumni are working in many prestigious institutions and companies across the country. We have formed the university alumni group and are networking our existing students with the alumni for internship and placements," he said. University placement officer Dr Paramesh said that in the second round of placement drive, 75 students have got jobs; nine students in Avantis Fellows, 17 students in Azim Premji Foundation, 13 students in Aakash Byju's and the remaining students are placed in Qspiders and KodNest Technologies, he said. On the occasion, Prof Venkaraman Doddi and selected students were present.

E 8 PRO
MERA

# Vice-Chancellor of CUK hails academic performance of outgoing students



Battu Satyanarayana, Vice-Chancellor of Central University of Karnataka, along with students who got jobs during the campus placement drive, on Friday. ARUN KULKARNI

The Hindu Bureau
KALABURAGI

Pointing to the excellent academic performance of students at Central University of Karnataka (CUK), Battu Satyanarayana, Vice-Chancellor of CUK, said that the students, while going out of the university, would carry not just a degree certificate but a decent job or a NET/ JRF to conduct research in prestigious national institutes.

"There has always been a great demand for those with skills and talents and academic degrees. Industries are always in search of the right and competent candidates. It is a matter of pride, our students are getting placements in prestigious companies. You should work hard and earn a name and fame to the university committed to capacity building and nurturing students," he said.

He was addressing the students who got campus placement at the university campus on Friday.

Registrar Basavaraj P. Donur said the university was providing all the required training and placement assistance to students.

"The university has completed 14 years and is proud that many of our alumni work in prestigious institutions and companies across the country. We have formed the university alumni group and networking our existing students with the alumni for internship and placements," he said.

University Placement Officer Paramesh said that 75 students were placed in the second round of the placement drive. Nine students have been placed in Avantis Fellows, 17 in Ajim Premji Foundation, 13 in Akash Byjus, and the remaining in Qspiders and KodNest Technologies, he added.

# ಸಿಯುಕೆ 75 ವಿದ್ಯಾರ್ಥಿಗಳಿಗೆ ಸಿಕ್ತು ನೌಕರಿ

ವಿಜಯವಾಣಿ ಚಿತ್ರ



ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿವಿ ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳ ಸಂದರ್ಶನದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳೊಂದಿಗೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ, ಕುಲಸಚಿವ ಪ್ರೊ.ಬಸವರಾಜ ಡೋಣೂರ, ಡಾ.ವೆಂಕಟರಮಣ ದೊಡ್ಡಿ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದ ಉದ್ಯೋಗ ಪ್ರಮಾಣಪತ್ರದೊಂದಿಗೆ ಹೊರಗಡೆ ಹೋಗಬೇಕು ಅಥವಾ ಎನ್‌ಇಟಿ/ಜೆಆರ್‌ಎಫ್ ಮಾಡಿ ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸಂಶೋಧನೆ ಮಾಡಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆದ ಸಿಯುಕೆ 75 ವಿದ್ಯಾರ್ಥಿಗಳಿಗೆ ಶುಕ್ರವಾರ ನೇಮಕಾತಿ ಪತ್ರ ವಿತರಿಸಿದ ಅವರು, ವಿದ್ಯಾರ್ಥಿಗಳು ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಸೇರಿ ಸೇವೆ ಮಾಡಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಸಂಸ್ಥೆಗಳು ತುದಿಗಾಲಲ್ಲಿ ನಿಂತಿವೆ. ಹೀಗಾಗಿ ಕಠಿಣ ಪರಿಶ್ರಮದಿಂದ ಕೆಲಸ ಮಾಡಿ ವಿಶ್ವವಿದ್ಯಾಲಯಕ್ಕೆ ಹೆಸರು ತರಬೇಕು ಎಂದು ಕಿವಿಮಾತು ಹೇಳಿದರು.

ಕುಲಸಚಿವ ಪ್ರೊ.ಬಸವರಾಜ ಡೋಣೂರ ಮಾತನಾಡಿ, ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಅಗತ್ಯ ತರಬೇತಿ ಮತ್ತು ಮೂಲಸೌಕರ್ಯ ಒದಗಿಸಲು ಸಿಯುಕೆ ಬದ್ಧವಾಗಿದೆ. ವಿವಿ ಪ್ರಾರಂಭವಾಗಿ 14 ವರ್ಷಗಳಾಗಿದ್ದು, ನಮ್ಮ ವಿದ್ಯಾರ್ಥಿಗಳು ದೇಶವ್ಯಾಪಿ ಅನೇಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ಸಂಗತಿ ಎಂದರು.

ವಿವಿ ಉದ್ಯೋಗ ಮತ್ತು ತರಬೇತಿ ಅಧಿಕಾರಿ ಡಾ.ಪರಮೇಶ್ ಮಾತನಾಡಿ, ಅವಂಟಿಸ್ ಫೆಲೋಸ್ 9, ಅಜೀಂ ಪ್ರೇಮ್‌ಜಿ ಫೌಂಡೇಷನ್ 17, ಆಕಾಶ ಬೈಜೂಸ್‌ನಲ್ಲಿ 13 ಸೇರಿ ಅನೇಕ ಕಂಪನಿಗಳಲ್ಲಿ ನಮ್ಮ ವಿದ್ಯಾರ್ಥಿಗಳು ಉದ್ಯೋಗ ಪಡೆದಿದ್ದಾರೆ. 2ನೇ ಹಂತದ ಉದ್ಯೋಗ ಮೇಳ ಇದಾಗಿದ್ದು, ಆಗಸ್ಟ್‌ವರೆಗೆ ಮುಂದುವರಿಯಲಿದೆ. ಈ ಅವಧಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಉದ್ಯೋಗ ಪಡೆಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಡಾ.ವೆಂಕಟರಮಣ ದೊಡ್ಡಿ ಇತರರಿದ್ದರು.

teaching.

# CUK students get campus placement

KALABURAGI, DHNS: As many as 75 students have got placement in campus selection in Central University of Karnataka on Friday. These students are placed in various companies including Avantis Fellows, Ajim Premji Foundation, Akash Byjus, Qspiders and KodNest Technologies.

Vice-Chancellor Battu Satyanaraya said that while going out from university along with certificate, students should go with jobs or with NET or JRF to do research in the prestigious national institutes. He further said, "there is always demand for talented students in the industry and companies will be waiting for right candidates. The students should get into prestigious companies and work hard to bring name and fame to the university. University is committed to capacity building and nurturing the students."

Registrar Basavaraj Donur said that the university is providing all the required training and placement assistance to the students. The university has completed 14 years and it is proud that many of our alumni are working in many prestigious institutions and companies across the country. We have formed the university alumni group and networking our existing students with the alumni for internship and placements, he added.

University placement officer Paramesh and Prof Venkaraman Doddi were present.

8 PRO
MERA

# ಸಿಯುಕೆ 31 ವಿದ್ಯಾರ್ಥಿಗಳ ನೇಮಕಾತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವತಿಯಿಂದ ಪ್ರಸಕ್ತ ಸಾಲಿನಲ್ಲಿ 31 ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ನೇಮಕ ಆಗಿದ್ದಾರೆ.

ನೇಮಕಾತಿ ಆದೇಶ ಪತ್ರ ವಿತರಿಸಿದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ, 'ಎಲ್ಲ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸುವ ಮೊದಲೇ ಕೆಲಸ ಪಡೆಯುವಂತೆ ಮಾಡಲು ಸಿಯುಕೆ ಪ್ರಯತ್ನಿಸುತ್ತಿದೆ' ಎಂದು ಹೇಳಿದರು.

'ಸಿಯುಕೆ ವಿದ್ಯಾರ್ಥಿಗಳು ಟಿಸಿಎಸ್‌ನಂತಹ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆದಿರುವುದಕ್ಕೆ ತುಂಬಾ ಸಂತೋಷವಾಗಿದೆ. ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪ್ಲೇಸ್‌ಮೆಂಟ್ ಅಧಿಕಾರಿ ಅವರನ್ನು ಅಭಿನಂದಿಸುತ್ತೇನೆ' ಎಂದರು.

'ಕೋರ್ಸ್ ಪೂರ್ಣಗೊಳಿಸುವ ಮೊದಲೇ ವಿದ್ಯಾರ್ಥಿಗಳು ಕೆಲಸ ಪಡೆಯುವಂತೆ ಮಾಡುವುದೇ ನಮ್ಮ ಗುರಿ ಆಗಿದೆ. ಅದಕ್ಕಾಗಿ ವಿವಿಧ ಕಂಪನಿಗಳೊಂದಿಗೆ ಉತ್ತಮ ಸಂಬಂಧ ಬೆಳೆಸಲು ಮತ್ತು ಉದ್ಯೋಗ ಕೋಶವನ್ನು ಬಲಪಡಿಸಲು ಹೆಚ್ಚು ಒತ್ತು ನೀಡುತ್ತೇವೆ' ಎಂದು ಹೇಳಿದರು.

ಉದ್ಯೋಗ ಕೋಶದ ಅಧಿಕಾರಿ ಡಾ. ಪರಮೇಶ್ ಮಾತನಾಡಿ, 'ಎಂಬಿಎ- 9 ವಿದ್ಯಾರ್ಥಿಗಳು, ಎಂಜಿನಿಯರಿಂಗ್‌ನ- 17, ಎಂಸಿಎ- 4 ಮತ್ತು ಒಬ್ಬ ಎಂ.ಟೆಕ್ ವಿದ್ಯಾರ್ಥಿ ಪ್ರಸ್ತುತ ಟಿಸಿಎಸ್, ಕ್ವೆಸ್ಸ್‌ಕಾರ್ಪ್ ಡರ್ಸ್, ಹೋಮ್ ಫಸ್ಟ್ ಫೈನಾನ್ಸ್ ಇಂಡಿಯಾ ಮತ್ತು ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನೇಮಕ ಆಗಿದ್ದಾರೆ' ಎಂದು ಮಾಹಿತಿ ನೀಡಿದರು.

'ಹಲವು ಕಂಪನಿಗಳು ನೇಮಕಾತಿ ಪ್ರಕ್ರಿಯೆಯಲ್ಲಿವೆ. ಇದೀಗ ಪ್ರಾರಂಭ ಆಗಿರುವ ನೇಮಕಾತಿ ಪ್ರಕ್ರಿಯೆಯು ವಿದ್ಯಾರ್ಥಿಗಳು ತಮ್ಮ ಅಂತಿಮ ಸೆಮಿಸ್ಟರ್ ಪೂರ್ಣಗೊಳಿಸುವವರೆಗೆ ಇರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ನೇಮಕಗೊಳ್ಳಲಿದ್ದಾರೆ' ಎಂದರು.



ಕಲಬುರಗಿ: ವಿವಿಧ ಕಂಪನಿಗಳಲ್ಲಿ ಉದ್ಯೋಗಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳೊಂದಿಗೆ ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ.

# ಸಿಯುಕೆ: ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ

**ಸಂ.ಕ. ಸಮಾಚಾರ ಕಲಬುರಗಿ:** ಎಲ್ಲ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸುವ ಮೊದಲೇ ಕೆಲಸ ಪಡೆಯುವಂತಾಗಲು ಸಿಯುಕೆ ದೂರದೃಷ್ಟಿ ಗುರಿ ಇಟ್ಟುಕೊಂಡಿದೆ. ಈ ನಿಟ್ಟಿನಲ್ಲಿ ಪ್ರತಿಷ್ಠಿತ ಕಂಪನಿಗಳ ಜತೆ ಚರ್ಚಿಸಿ, ಆಹ್ವಾನಿಸಲಾಗುವುದು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

ಸಿಯುಕೆ ಕ್ಯಾಂಪಸ್‌ನಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಿ ಮಾತನಾಡಿದ ಅವರು, 'ನಮ್ಮ ವಿದ್ಯಾರ್ಥಿಗಳು ತಮ್ಮ ಕೋರ್ಸ್‌ಗಳನ್ನು ಪೂರ್ಣಗೊಳಿಸುವ ಮೊದಲೇ ಟಿಸಿಎಸ್ ನಂತಹ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ ಪಡೆದಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ.

ನಮ್ಮ ದೀರ್ಘಾವಧಿಯ ಗುರಿಯು ನಮ್ಮ ಎಲ್ಲ ವಿದ್ಯಾರ್ಥಿಗಳನ್ನು ಅವರ ಕೋರ್ಸ್ ಪೂರ್ಣಗೊಳಿಸುವ ಮೊದಲೇ ಕಂಪನಿಗಳಲ್ಲಿ ಕೆಲಸ ಪಡೆಯುವಂತೆ ಶ್ರಮಿಸಲಾಗಿದೆ' ಎಂದರು.

ಮುಂದಿನ ದಿನಗಳಲ್ಲಿ ವಿವಿಧ ಕಂಪನಿಗಳೊಂದಿಗೆ ಒಳ್ಳೆಯ ಸಂಬಂಧಗಳನ್ನು ಬೆಳಸಲು ಮತ್ತು ನಮ್ಮ ಉದ್ಯೋಗಕೋಶವನ್ನು ಬಲಪಡಿಸಲು ಹೆಚ್ಚು ಒತ್ತು ನೀಡುತ್ತೇವೆ ಎಂದು ಹೇಳಿದರು. ಉದ್ಯೋಗ ಕೋಶದ ಅಧಿಕಾರಿ ಡಾ. ಪರಮೇಶ್ ಮಾತನಾಡಿ, 'ಎಂಬಿಎ ಕೋರ್ಸ್‌ನ 9 ವಿದ್ಯಾರ್ಥಿಗಳು, ಇಂಜಿನಿಯರಿಂಗ್‌ನ 19 ವಿದ್ಯಾರ್ಥಿಗಳು, ಎಂಸಿಎದ 3 ವಿದ್ಯಾರ್ಥಿಗಳು ಮತ್ತು ಒಬ್ಬ ಎಂಟೆಕ್ ವಿದ್ಯಾರ್ಥಿ ಪ್ರಸ್ತುತ ಟಿಸಿಎಸ್, ಕ್ಯೂಸ್ಪೈಡರ್ಸ್, ಹೋಮ್ ಫಸ್ಟ್ ಫೈನಾನ್ಸ್ ಇಂಡಿಯಾ ಮತ್ತು ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನೇಮಕವಾಗಿದ್ದಾರೆ. ಹಲವು ಕಂಪನಿಗಳು ನೇಮಕಾತಿ ಪ್ರಕ್ರಿಯೆಯಲ್ಲಿವೆ. ಇದೀಗ ಪ್ರಾರಂಭವಾಗಿರುವ ನೇಮಕಾತಿ ಪ್ರಕ್ರಿಯೆಯು ವಿದ್ಯಾರ್ಥಿಗಳು ತಮ್ಮ ಅಂತಿಮ ಸೆಮಿಸ್ಟರ್ ಪೂರ್ಣಗೊಳಿಸುವವರೆಗೆ ಇರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳನ್ನು ವಿವಿಧ ಕಂಪನಿಗಳಲ್ಲಿ ನೇಮಕಗೊಳ್ಳಲಿದ್ದಾರೆ' ಎಂದು ಹೇಳಿದರು. ಅಲ್ಲದೆ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಚಿಂತನೆ ನಡೆದಿದೆ ಎಂದು ವಿವರಿಸಿದರು.

### ಟಿಸಿಎಸ್ ಸೇರಿ ಪ್ರತಿಷ್ಠಿತ ಕಂಪನಿಗಳಿಂದ ಕ್ಯಾಂಪಸ್ ಸಂದರ್ಶನ

# ಸಿಯುಕೆ ವಿದ್ಯಾರ್ಥಿಗಳಿಗೆ ಸಿಕ್ತು ನೌಕರಿ



ವಿಜಯವಾಣಿ ಚಿತ್ರ

ಟಿಸಿಎಸ್ ಸೇರಿ ವಿವಿಧ ಕಂಪನಿಗಳಲ್ಲಿ ಉದ್ಯೋಗ ಗಿಟ್ಟಿಸಿದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ, ಉದ್ಯೋಗ ಕೋಶದ ಅಧಿಕಾರಿ ಡಾ.ಪರಮೇಶ ಇದ್ದರು.

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ವಿದ್ಯಾರ್ಥಿಗಳು ಶಿಕ್ಷಣ ಪೂರ್ಣಗೊಳಿಸುವ ಮುನ್ನ ಉದ್ಯೋಗ ದೊರಕುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ತಿಳಿಸಿದರು.

ವಿವಿಧ ಕಂಪನಿಗಳಲ್ಲಿ ನೌಕರಿ ಪಡೆದ ವಿದ್ಯಾರ್ಥಿಗಳಿಗೆ ನೇಮಕ ಆದೇಶ ಪತ್ರ ವಿತರಿಸಿದ ಅವರು, ನಮ್ಮ ವಿದ್ಯಾರ್ಥಿಗಳು ಕೋರ್ಸ್ ಪೂರ್ಣಗೊಳಿಸುವ ಮೊದಲೇ ಟಿಸಿಎಸ್‌ನಂತಹ ಪ್ರತಿಷ್ಠಿತಕಂಪನಿಗಳಲ್ಲಿಉದ್ಯೋಗಪಡೆಯುತ್ತಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪ್ಲೇಸ್‌ಮೆಂಟ್ ಅಧಿಕಾರಿ ಡಾ.ಪರಮೇಶ ಅವರನ್ನು ಅಭಿನಂದಿಸುವುದಾಗಿ ಹೇಳಿದರು.

ಡಾ.ಪರಮೇಶ ಮಾತನಾಡಿ, ಎಂಬಿಎ ಒಂಬತ್ತು, ಇಂಜಿನಿಯರಿಂಗ್ 19, ಎಂಸಿಎ ಮೂವರು ಮತ್ತು ಒಬ್ಬ ಎಂಟೆಕ್ ವಿದ್ಯಾರ್ಥಿ ಟಿಸಿಎಸ್, ಕ್ಯೂಸ್ಪೈಡರ್ಸ್, ಹೋಮ್ ಫಸ್ಟ್ ಫೈನಾನ್ಸ್ ಇಂಡಿಯಾ ಮತ್ತು ಇಎಸ್‌ಎಎಫ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ನೇಮಕಗೊಂಡಿದ್ದಾರೆ. ಇದೀಗ ಪ್ರಾರಂಭವಾಗಿರುವ ನೇಮಕಾತಿ ಪ್ರಕ್ರಿಯೆ ವಿದ್ಯಾರ್ಥಿಗಳು ತಮ್ಮ ಅಂತಿಮ ಸೆಮಿಸ್ಟರ್ ಮುಗಿಸುವವರೆಗೆ ಇರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ನೇಮಕಗೊಳ್ಳಲಿದ್ದಾರೆ ಎಂದು ಆಶಯ ವ್ಯಕ್ತಪಡಿಸಿದರು.